# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 254 |
| **ಸದಸ್ಯರ ಹೆಸರು** | : | ಶ್ರೀ ಎಸ್.ವ್ಹಿ.ಸಂಕನೂರ<br>(ಪದವೀಧರರ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 28.01.2026 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪಶ್ಚಿಮ ಕರಾವಳಿ ಎಷ್ಟು ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿದೆ. ಈ ವ್ಯಾಪ್ತಿಯಲ್ಲಿ ನಿರ್ಮಾಣವಾದ ಬಂದರುಗಳ ಸಂಖ್ಯೆ ಎಷ್ಟು ಮತ್ತು ಅವು ಯಾವ ಯಾವ ಸ್ಥಳದಲ್ಲಿ ಇವೆ; ( ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯವು ಸುಮಾರು 328 ಕಿ.ಮೀ. ಉದ್ದದ ವಿಶಾಲವಾದ ಕರಾವಳಿ ತೀರವನ್ನು ಹೊಂದಿರುತ್ತದೆ.<br><br>ರಾಜ್ಯದಲ್ಲಿ ಈ ಕೆಳಕಂಡ, ಒಟ್ಟು 13 ಕಿರು ಬಂದರುಗಳಿದ್ದು, ಇವು ಕರ್ನಾಟಕ ಜಲಸಾರಿಗೆ ಮಂಡಳಿಯ ಅಧೀನದಲ್ಲಿವೆ.<br><br>1) ಕಾರವಾರ<br>2) ಬೇಲೇಕೇರಿ<br>3) ಕೇಣಿ<br>4) ತದಡಿ<br>5) ಪಾವಿನಕುರ್ವೆ<br>6) ಹೊನ್ನಾವರ<br>7) ಮಂಕಿ<br>8) ಭಟ್ಕಳ<br>9) ಕುಂದಾಪುರ<br>10)ಹಂಗಾರಕಟ್ಟಾ<br>11) ಮಲ್ಪೆ<br>12) ಪಡುಬಿದ್ರಿ<br>13) ಹಳೆ ಮಂಗಳೂರು.<br><br>ಇದಲ್ಲದೇ ಒಂದು ಬೃಹತ್ ಬಂದರು (ನವ ಮಂಗಳೂರು ಬಂದರು) ಇದ್ದು, ಇದು ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ" |
| ಆ) | ಅಂಕೋಲಾ ತಾಲ್ಲೂಕಿನ ಖೇಣಿ ಬಂದರು ನಿರ್ಮಾಣ ಮಾಡಲು ರಾಜ್ಯ ಸರ್ಕಾರ ನಿರ್ಧಾರ ಕೈಗೊಂಡಿದೆಯೇ; ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು; | 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 253ರಲ್ಲಿ "ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೇಣಿ- ಬೇಲಿಕೇರಿಯಲ್ಲಿ ಗ್ರೀನ್‌ಫೀಲ್ಡ್ ಬಂದರನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ ಎಂದು ಘೋಷಣೆ ಮಾಡಲಾಗಿರುತ್ತದೆ.<br><br>ಅದರಂತೆ ಸರ್ಕಾರದ ಆದೇಶ ಸಂ. : IDD 68 PSP 2022 ದಿನಾಂಕ: 08.04.2022 ರಲ್ಲಿ ಕರಾವಳಿ ಮತ್ತು ಒಳನಾಡು ಪ್ರದೇಶಗಳ ಆರ್ಥಿಕ ಸಮೃದ್ಧಿಗೆ ಸಹಕಾರಿಯಾಗುವ ದೃಷ್ಟಿಯಿಂದ ಉತ್ತರ ಕನ್ನಡ ಜಿಲ್ಲೆಯ ಕೇಣಿ-ಬೇಲೆಕೇರಿಯಲ್ಲಿ ಗ್ರೀನ್‌ಫೀಲ್ಡ್ ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಆದೇಶಿಸಲಾಗಿರುತ್ತದೆ .<br><br>ಸದರಿ ಬಂದರನ್ನು ರೂ. 4,118.00 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. |

| | | |
|---|---|---|
| ಇ) | ಖೇಣಿ ಬಂದರು ನಿರ್ಮಾಣ ಮಾಡಲು ಭಾರತೀಯ ನೌಕಾನೆಲೆ ಅವರ ಅನುಮತಿ ಪಡೆಯಲಾಗಿದೆಯೇ; | ಕೇಣಿ ಬಂದರು ನಿರ್ಮಾಣ ಯೋಜನೆಯನ್ನು ಅಭಿವೃದ್ಧಿಪಡಿಸುವ ಕುರಿತು ಭಾರತೀಯ ನೌಕಾನೆಲೆ ರವರಿಗೆ ದಿನಾಂಕ:27/3/2024ರಂದು ಪತ್ರ ಬರೆಯಲಾಗಿರುತ್ತದೆ. |
| ಈ) | ಖೇಣಿ ಬಂದರು ನಿರ್ಮಾಣಕ್ಕೆ ಸಾರ್ವಜನಿಕರಿಂದ ವ್ಯಾಪಕ ವಿರೋದ ವ್ಯಕ್ತವಾಗಿರುವುದು ನಿಜವೇ; (ಮಾಹಿತಿ ನೀಡುವುದು) | ಕೇಣಿ ಬಂದರು ನಿರ್ಮಾಣಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗುತ್ತಿದ್ದು, ಈ ಕುರಿತು ದಿನಾಂಕ : 22.08.2025 ರಂದು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲಾಗಿರುತ್ತದೆ. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಯ ಮುಖಾಂತರ ಅಂತಿಮ ವರದಿಗಾಗಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (MoEFCC) ರವರಿಗೆ ಸಲ್ಲಿಸಲಾಗಿದೆ. |
| ಉ) | ಈಗಾಗಲೇ ಬೇಲಿಕೇರಿ ಬಂದರು ಇರುವಾಗ ಪಕ್ಕದಲ್ಲಿ ಮತ್ತೊಂದು ಖೇಣಿ ಬಂದರು ಮಾಡುವ ಉದ್ದೇಶವೇನು? | ಕರ್ನಾಟಕ ಕರಾವಳಿಯು 328 ಕಿ.ಮೀ. ತೀರ ಪ್ರದೇಶವನ್ನು ಹೊಂದಿದ್ದು, ರಾಷ್ಟ್ರದ ಒಟ್ಟು ಬಂದರುಗಳ 4.5% ರಷ್ಟು ಸರಕುಗಳನ್ನು ನಿರ್ವಹಿಸುತ್ತಿದೆ.<br><br>ಕರ್ನಾಟಕ ಕಡಲ ದೃಷ್ಟಿಕೋನ ಯೋಜನೆ (Karnataka Maritime Perspective Plan) ಪ್ರಕಾರ, 2035 ರ ಯೋಜನಾ ವರ್ಷದಲ್ಲಿ ಕರ್ನಾಟಕದ ಒಳನಾಡು ಸರಕು ಸಾಗಣಿಕೆ ಸಾಮರ್ಥ್ಯ ಸಂಭಾವ್ಯತೆಯು 177 MTPA ಆಗುವ ನಿರೀಕ್ಷೆಯಿದೆ.<br><br>ಪ್ರಸ್ತುತ ರಾಜ್ಯವು ಕೇವಲ ಒಂದು ಆಳವಾದ ಬಂದರನ್ನು ಹೊಂದಿದ್ದು, ಮತ್ತೊಂದು ಆಳ ಬಂದರಿನ ಅವಶ್ಯಕತೆಯ ನಿಟ್ಟಿನಲ್ಲಿ ಭಾರತ ಸರ್ಕಾರದ ಬಂದರುಗಳು ಶಿಪ್ಪಿಂಗ್ ಮತ್ತು ಜಲಮಾರ್ಗ ಸಚಿವಾಲಯದ ಸೂಚನೆಯಂತೆ M/s AECOM, ಆಗಸ್ಟ 2016 ರಲ್ಲಿ Techno-Economic Feasibility ವರದಿಯನ್ನು ಸಿದ್ಧಪಡಿಸಿದ್ದು, ಕರ್ನಾಟಕದ ಸಂಪೂರ್ಣ ಕರಾವಳಿಯನ್ನು ಒಳನಾಡು ಸಂಪರ್ಕದಂತಹ ಅಂಶಗಳನ್ನು ಗಣನೆಗೆ ತೆಗೆದುಕೊಂಡು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಸಾಮಿಪ್ಯ, ಪರಿಸರ ಕಾಳಜಿ ಮತ್ತು ಇತರರಲ್ಲಿ ವಾಸಸ್ಥಾನದ ವರದಿ ಆಧರಿಸಿ ಕೇಣಿ ಪ್ರದೇಶವನ್ನು ಸೂಕ್ತ ತಾಣವಾಗಿ ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ. |

**IDD 09 PSP 2026**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**